'ಬೈದರೂ ನಗುತಿದ್ದೀಯಲ್ಲೇ! ಹುಹ್ಹ್... $%#@###$$$@#... ಮೊದಲು ಬೊಗಳಿಬಿಡೇ, ನನ್ನ ಬಗ್ಗೆ ಇನ್ನೇನೇನು ಗೊತ್ತೂಂತ! ನಿನ್ನನ್ನು ಇನ್ನಿಲ್ಲ ಅನಿಸಿಬಿಡುತೀನಿ... ಹುಹ್ಹ್... ಕೆಟ್ಟ ಹೆಣ್ಣೆ...'

★★★

'ಗಂಡೇ ಗಂಡೇ... ಇದನ್ನೇ ಜೆಂಡರ್ ಬಯಾಸ್ ಅನ್ನೋದು. ಲಿಂಗತರತಮ! ನೀನೊಬ್ಬ ಬಿಡಾಡಿ ಅನ್ನೋದನ್ನ ಎಷ್ಟು ಹೆಮ್ಮೆಯಿಂದ ಹೇಳಿಕೋತೀಯೆ ಅಲ್ಲವಾ? ನಾನೂ ನಿನ್ನ ಹಾಗೆ ಬಿಡಾಡಿಹೆಣ್ಣು ಅಷ್ಟೆ.A **flaneuse!** ನಿನ್ನ ಹಾಗೆ ಅಪ್ರಯೋಜಕವಾಗಿ ಬೀದಿ ಸುತ್ತುವ ಕೆಲಸವನ್ನು ಒಬ್ಬ ಗಂಡಸು ಮಾಡಿದರೆ ಅದಕ್ಕೆ ಗತ್ತಿನ ವಿಶೇಷಗಳನ್ನು ಹಚ್ಚಲಾಗುತ್ತಲ್ಲವಾ? ಅದನ್ನು ಅಷ್ಟೇ ಗಮ್ಮತ್ತಿನಿಂದ ಸಾಹಿತ್ಯವೂ ಒಪ್ಪಿಕೊಳ್ಳುತ್ತೆ... ಅವರು ಬರೆದಿದ್ದನ್ನು ಮೆರೆಸುತ್ತೆ! ಮತ್ತು ಬರೆದವರನ್ನ ಮರೆಯುತ್ತೆ!! ಅದೇ ಕೆಲಸವನ್ನೊಬ್ಬ ಹೆಣ್ಣು ಮಾಡಿದರೆ ಅವಳು ಭೋಸುಡಿ ಆಗುತಾಳೆ. ಸೂಳೆ, ಕಳ್ಳ ರಂಡೆ ಆಗುತಾಳೆ! ಥತ್ತ್... ಇರಲಿ... ಬುದ್ಧನ ಕಾಲದ ವೈಶಾಲಿಯಲ್ಲಿ ನನ್ನನ್ನು ಅಥವಾ ನನ್ನಂಥವಳನ್ನು ನಗರವಧು ಅಂತ ಕರೆಯೋರು. ಹ್ಞಾಂ... ಜನಪದ–ಕಲ್ಯಾಣಿ ಅಂತಲೂ ಕರೆಯೋದಿತ್ತು... ನನ್ನ ಹೆಸರು ಆಮ್ರಪಾಲಿ. ನನಗೆ ನಾನೇ ಕರಕೊಂಡಿದ್ದು... ನನಗೆ ಚಿಕ್ಕಂದಿನಿಂದಲೂ ಬೀದಿಸುತ್ತುವ ಆಸೆ. ಮಹಾನಗರದ ಬೀದಿಗಳಲ್ಲಿರುವ ಮನುಷ್ಯರ ತೆವಲುತೀಟೆಗಳನ್ನು ನೋಡುವ ಆಸೆ. ಜಂಗುಳಿಯ ನಡುವೆ ಕಂಬದ ಹಾಗೆ ನಿಂತು ಅವರನ್ನೆಲ್ಲ ಓದುವ ಆಸೆ... ಆ ಕುರಿತು ಬರೆಯುವ ಆಸೆ. ನಿನ್ನ ಹಾಗೇನೇ... ಆದರೆ ಆದರೆ...'

'....'

'ಸೂಕ್ಷ್ಮಜ್ಞನಾದ ನಿನಗಿದು ಗೊತ್ತು ಅಂದುಕೊಂಡಿದೀನಿ. ಇಷ್ಟಕ್ಕು, ಮಹಾನಗರಗಳನ್ನು ನಿರ್ಮಿಸುವುದೆಲ್ಲ ಗಂಡಸರೇ ತಾನೆ? ನಾವಿರುವ ಸಿಟಿಗಳು ಎಷ್ಟೇ ಡೆಮಾಕ್ರೆಟಿಕ್ ಆಗಿದ್ದರೂ ಜೆಂಡರ್‌ಬಯಾಸ್ಡ್ ಆಗಿದೆ... ಯಾಕೆಂದರೆ ಇಲ್ಲಿನ ನಡೆದಾರಿಗಳಲ್ಲಿ, ಉದ್ಯಾನಗಳಲ್ಲಿ, ಬಸ್ಸು–ಮೆಟ್ರೋ ಇತ್ಯಾದಿಗಳಲ್ಲಿ–ಒಂದು ಹೆಣ್ಣು ಒಬ್ಬ ಗಂಡಿನಷ್ಟು ಸರಾಗವಾಗಿ ಎಲ್ಲೆಂದರಲ್ಲಿ ಅಡ್ಡಾಡುವ ಹಾಗಿಲ್ಲ! ಪಾರ್ಕಿನಲ್ಲಿ ಬೆಂಚೊಂದರ ಮೇಲೆ ಒಬ್ಬಂಟಿ ಕೂತಿರೋಕಾಗಲ್ಲ! ಹೀಗೆ ಏಕಾಏಕಿ ಹೆಣ್ಣು ಸಿಕ್ಕಳೋ ಪೊಲೀಸರು ಒದ್ದು ಒಳಗೆ ಹಾಕುತಾರೆ! ಹೀಗೆಲ್ಲ ಗಂಡಸಿನ ಸಮಕ್ಕು ಅಡ್ಡಾಡುವವಳು ವ್ಯಭಿಚಾರಿಣಿ ಅನ್ನೋ ಬಿರುದು ಪಡೀತಾಳೆ. ತೀರಾ ಒರಟಾಗಿ ಸೂಳೆ ಅಂತನಿಸಿಕೊಳುತಾಳೆ... ಹೌದು... ಹೆಣ್ಣು ಈ ಮಹಾನಗರಿಯ ಕಾಲದೇಶಗಳಲ್ಲಿ ಸಮಯಸಂದರ್ಭಗಳಲ್ಲಿ–ಒಬ್ಬ ಗಂಡಿನ ಹಾಗೆ, ಎಲ್ಲೆಲ್ಲೂ ಯಾವುದೇ ಕಾಲದಲ್ಲೂ ಇರುವ ಹಾಗಿಲ್ಲ! ಯಾಕೆಂದರೆ ಅವಳ ಮೇಲೆ ನಿಬಂಧನೆಗಳಿವೆ. ಮಾಡದೆಯೂ ಮಾಡಿಡಲಾದ ಕಟ್ಟಳೆಗಳಿವೆ... ಅವಳು ಹೋಗಬಹುದಾದ ಜಾಗಗಳಿವು ಅನ್ನೋ ನಿಗದಿಗಳಿವೆ. ಹಾಗೇ, ಇವಿವೇ ಜಾಗಗಳಿಗೆ ಅವಳು ಹೋಗುವುದಾದರೆ, ಹೋಗಲಿಕ್ಕೆಕಾಲದ ನಿಯಮಗಳಿವೆ. ಗಡವುಗಳಿವೆ! ಒಟ್ಟಿನಲ್ಲಿ ನೀವು ಗಂಡಸರಿಗೆ ಹೋಲಿಸಿದರೆ, ಹೆಣ್ಣೊಬ್ಬಳ ಹೊತ್ತುಗೊತ್ತುಗಳೇ ಬೇರೆ!!'

'.....'

'ಸ್ಟಡಿ ಆಫ್ ದಿಸ್ ಈಸ್ ವೆರಿ ಇಂಟರೆಸ್ಟಿಂಗ್ ಯು ನೋ! ಬೀದಿಹೋಕ ಹೆಣ್ಣುಗಳನ್ನು ನೀನೊಮ್ಮೆ ಅಧ್ಯಯನ ಮಾಡಿ ನೋಡು. ಎಂತಹ ಫಲಿತಾಂಶ ಸಿಗುತ್ತೆ ಗೊತ್ತಾ? ಮಹಾನಗರಗಳ ರಚನೆಯಲ್ಲೇ ಲಿಂಗತಾರತಮ್ಯ ಇದೆ ಅನ್ನೋದು ಗೊತ್ತಾಗುತ್ತೆ...'